Fax No. 080-22875798
2873151-Extn-203

# ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
# DIRECTORATE OF MEDICAL EDUCATION

ಸಂಖ್ಯೆ: ವೈಶಿ/ಯುಜಿ–ಪಿಜಿ/ಶುಮ/01/2020–21

ದಿನಾಂಕ: 11 –02–2021

**ಸುತ್ತೋಲೆ**

**ವಿಷಯ:–** 2020–21ನೇ ಸಾಲಿಗೆ ಅರ್ಹ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ನೀಡಲು ಮೆಟ್ರಿಕ್ ನಂತರದ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ (State Scholarship portal for post Matric) ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಕರೆದಿರುವ ಬಗ್ಗೆ.

**ಉಲ್ಲೇಖ:–** ಸಮಾಜ ಕಲ್ಯಾಣ ಇಲಾಖೆಯ ಆದೇಶ ಸಂಖ್ಯೆ: ಸಕಇ 178 ಪಕವಿ 2015, ಬೆಂಗಳೂರು ದಿನಾಂಕ: 31.12.2015 ಮತ್ತು ದಿನಾಂಕ: 30.06.2016

*****

2020–21ನೇ ಸಾಲಿಗೆ ಅನ್ವಯಿಸುವಂತೆ ವೈದ್ಯಕೀಯ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ರಾಜ್ಯದ ಸರ್ಕಾರಿ / ಖಾಸಗೀ ಹಾಗೂ ಡೀಮ್ಡ್ ವೈದ್ಯಕೀಯ / ದಂತ ವಿದ್ಯಾಲಯಗಳಿಗೆ ಪ್ರವೇಶ ಪಡೆದು ಎಂಬಿಬಿಎಸ್ / ಬಿಡಿಎಸ್ ಪದವಿ ಹಾಗೂ ಸ್ನಾತಕೋತ್ತರ ವೈದ್ಯಕೀಯ ಮತ್ತು ದಂತ ವಿಜ್ಞಾನ ಡಿಗ್ರಿ / ಡಿಪ್ಲೊಮಾ / ಸೂಪರ್ ಸ್ಪೆಷಾಲಿಟಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ವರಮಾನ ರೂ. 2.50 ಲಕ್ಷಕ್ಕಿಂತ ಅಧಿಕವಿದ್ದು ರೂ. 10.00 ಲಕ್ಷಗಳ ಮಿತಿಯೊಳಗಿರುವ ಅರ್ಹ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿಸಲು ಇ–ಆಡಳಿತ ಇಲಾಖೆಯಿಂದ ಮೆಟ್ರಿಕ್ ನಂತರದ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ (State Scholarship portal for post Matric) ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿದ್ದು, ಸದರಿ ಪೋರ್ಟಲ್‌ನಲ್ಲಿ ದಿನಾಂಕ: 15/03/2021ರವರೆಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಮಾಡಿಕೊಟ್ಟಿರುತ್ತಾರೆ. ಅದರಂತೆ ಸಂಸ್ಥೆಯವರು ಅರ್ಹ ಇರುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ಅರಿವು ಮೂಡಿಸುವುದು ಹಾಗೂ ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ಸಹಕರಿಸುವುದು.

ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸುವ ಮೊದಲು ಅರ್ಹ ಇರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಮತ್ತು ಸಂಸ್ಥೆಯವರು ಈ ಕೆಳಗೆ ತಿಳಿಸಿರುವಂತೆ ಕ್ರಮ ವಹಿಸಬೇಕಾಗಿರುತ್ತದೆ.

1. ನೋಂದಣಿ (ಒಮ್ಮೆ ಮಾತ್ರ)–ಈ ಹಿಂದಿನ ವರ್ಷದಲ್ಲಿ State Scholarship portal for post Matric ಮೂಲಕ ವಿದ್ಯಾರ್ಥಿವೇತನ ಪಡೆದಿದ್ದಲ್ಲಿ ನೋಂದಣಿ ಪ್ರಕ್ರಿಯೆ ಅಗತ್ಯವಿಲ್ಲ.
2. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಲಾಗಿನ್ ಆಗಿ ಇ–ಧೃಢೀಕರಣ ಹಂತದವರೆಗೆ ಅರ್ಜಿಯನ್ನು ಸಲ್ಲಿಸಬೇಕು.
3. ಕಾಲೇಜಿನ ಇ–ಧೃಢೀಕರಣ ಅಧಿಕಾರಿಗಳಿಂದ ವಿದ್ಯಾರ್ಥಿಗಳ ದಾಖಲೆಗಳನ್ನು ಇ–ಧೃಢೀಕರಣ ಮಾಡಿ ಮತ್ತು ಇ–ಧೃಢೀಕರಣ ಐಡಿಯನ್ನು ಪಡೆಯಬೇಕು.
4. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಲಾಗಿನ್ ಆಗಿ ಇ–ಧೃಢೀಕರಣ ಐಡಿಗಳನ್ನು ನಮೂದಿಸಿ ಮತ್ತು ಅರ್ಜಿ ಸಲ್ಲಿಕೆಯ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು.

2--

5. ವಿದ್ಯಾರ್ಥಿಗಳು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಪಡೆಯಲು ನಿಮ್ಮ ಆಧಾರ್ ಸಂಖ್ಯೆಯನ್ನು ನಿಮ್ಮ ಬ್ಯಾಂಕ್ ಖಾತೆಗೆ ಜೋಡಣೆ ಮಾಡಿಸಿಕೊಳ್ಳಿ ಮತ್ತು ಬ್ಯಾಂಕಿನಲ್ಲಿ ನಿಮ್ಮ ಆಧಾರ್‌ಅನ್ನು NPCI ಗೆ ಜೋಡಣೆ ಮಾಡಿಸಿ.
6. ಇ-ಧೃಢೀಕರಣ ಮಾಡಿ ಸಲ್ಲಿಸಿದ ದಾಖಲೆಗಳ ಪ್ರತಿಯನ್ನು ಕಾಲೇಜಿನ ಮೂಲಕ ಈ ನಿರ್ದೇಶನಾಲಯಕ್ಕೆ ಅರ್ಜಿ ಸಲ್ಲಿಸುವ ಕಡೆಯ ದಿನಾಂಕದ ನಂತರ ಒಂದು ವಾರದ ಒಳಗೆ ಸಲ್ಲಿಸುವುದು.

**ಉದಾರಣೆಗೆ:** 1. ಸೀಟು ಹಂಚಿಕೆ ಪತ್ರ (ಸಿಇಟಿ/ಕಾಮೆಡ್-ಕೆ/ ನೀಟ್ / ಡಿಜಿಹೆಚ್‌ಎಸ್ ಮೂಲಕ ಪಡೆದಿದ್ದು)

2. ಹಿಂದಿನ ವರ್ಷದ ಅಂಕ ಪಟ್ಟಿ

| course | year | Required Marks cards |
|---|---|---|
| MBBS | 1st (Term 1 and 2) | PUC Marks card |
| | 2nd (Term 3 and 4) | Ist year MBBS pass marks card |
| | 3rd (Term 5 and 6) | Ist year MBBS pass marks card |
| | 4th (Term 7 and 8) | 2nd Year MBBS pass marks card |
| | 5th (Term 9) | 3rd year MBBS pass marks card |
| | Internship | Not eligible |

3. 2020-21ನೇ ಸಾಲಿಗೆ ಶುಲ್ಕ ಪಾವತಿಸಿದ ರಸೀದಿ (ಸೀಟುಗಳಿಗೆ ಅನುಗುಣವಾಗಿ ಸರ್ಕಾರದ ನಿಗಧಿ ಪಡಿಸಿದ ಪೂರ್ಣ ಪ್ರಮಾಣದ ಭೋಧನಾ ಶುಲ್ಕವನ್ನು ಪಾವತಿಸಿದ ರಸೀದಿ) ಸರ್ಕಾರಿ / ಸರ್ಕಾರಿ ಕೋಟಾ /ಖಾಸಗಿ ಕೋಟಾ.
4. 2019-20ನೇ ಸಾಲಿಗೆ ಆದಾಯಕ್ಕೆ ಸಂಬಂದಿಸಿದಂತೆ, 2020-21ನೇ ಸಾಲಿನ ಆದಾಯ ತೆರಿಗೆ ನಮೂನೆ ಅಥವಾ ವೇತನ ಪ್ರಮಾಣ ಪತ್ರ
5. ಹಾಲಿ ವರ್ಷದ ವ್ಯಾಸಂಗ ಪ್ರಮಾಣ ಪತ್ರ.
6. ಪಿಜಿ/ಸೂಪರ್ ಸ್ಪೆಷಾಲಿಟಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಶಿಷ್ಯವೇತನ ಪಡೆಯುತ್ತಿರುವ / ಪಡೆಯುತ್ತಿಲ್ಲದ ಹಾಗೂ ಹೊರಗಡೆ ತರಬೇತಿ ನಿರ್ವಹಿಸುತ್ತಿಲ್ಲದ (Out side Non Practice) ಪ್ರಮಾಣ ಪತ್ರ.
7. ಜಾತಿ ಪ್ರಮಾಣ ಪತ್ರ

3--

ಮೆಟ್ರಿಕ್ ನಂತರದ ರಾಜ್ಯ ವಿದ್ಯಾರ್ಥಿವೇತನ (State Scholarship portal for post Matric) ಪೋರ್ಟಲ್‌ನಲ್ಲಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಬಗ್ಗೆ ಮತ್ತು ಸಂಸ್ಥೆಯ ಇ-ದೃಢೀಕರಣ (E-Attestion Officer) ಅಧಿಕಾರಿಯವರು ದಾಖಲೆಗಳ ದೃಢೀಕರಣ ಮಾಡುವ ಬಗ್ಗೆ ಮಾರ್ಗಸೂಚಿಗಳನ್ನು ಈ ಕೆಳಗೆ ತಿಳಿಸಿರುವ ಸರ್ಕಾರದ ವೆಬ್‌ಸೈಟ್‌ನಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯಬಹುದಾಗಿರುತ್ತದೆ.

**http://ssp.postmatric.karnataka.gov.in**

ಯಾವುದೇ ಅರ್ಹ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್‌ನಲ್ಲಿ ದಾಖಲೆಗಳನ್ನು ದೃಢೀಕರಿಸಿಕೊಳ್ಳಲು ಮತ್ತು ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಸಾಧ್ಯವಾಗದಿದ್ದಲ್ಲಿ, ಆಯಾ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಇ-ದೃಢೀಕರಣ ಅಧಿಕಾರಿಗಳನ್ನೇ ನೇರವಾಗಿ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಿದೆ.

ನಿರ್ದೇಶಕರು, ವೈದ್ಯಕೀಯ ಶಿಕ್ಷಣ

Director of Medical Education
Ananda Rao Circle, Bangalore

ಪ್ರತಿಯನ್ನು:-

1. ಪ್ರಾಂಶುಪಾಲರು/ಡೀನ್/ನಿರ್ದೇಶಕರು, ಸರ್ಕಾರಿ/ಖಾಸಗಿ/ಇಎಸ್‌ಐಸಿ/ಡೀಮ್ಡ್ ವೈದ್ಯಕೀಯ / ದಂತ ಕಾಲೇಜುಗಳು ಕರ್ನಾಟಕ ರಾಜ್ಯ, ಇವರುಗಳಿಗೆ ಮುಂದಿನ ಕ್ರಮಕ್ಕಾಗಿ (ಈ ಸುತ್ತೋಲೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು).
2. ನೋಡಲ್ ಅಧಿಕಾರಿಗಳು, State Scholarship portal for post Matric, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ವೈದ್ಯಕೀಯ ಶಿಕ್ಷಣ ನಿರ್ದೇಶಕರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ (ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಚಾರ ಪಡಿಸಲು).
4. ಕಛೇರಿ ಪ್ರತಿ